“ಮಂಡ್ಯ ಜಿಲ್ಲಾ ಮಹಿಳಾ ವಕೀಲರುಗಳ ಸಮಗ್ರ ಅಧ್ಯಯನ”

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ ಮಹಿಳಾ ಅಧ್ಯಯನ ವಿಭಾಗಕ್ಕೆ
ಪಿ.ಎಚ್‌ಡಿ. ಪದವಿಗಾಗಿ ಸಾದರಪಡಿಸುತ್ತಿರುವ ಸಾರಲೇಖನ

ಸಂಶೋಧನ ವಿದ್ಯಾರ್ಥಿನಿ

ಶರ್ಮಿಳ
ಮಹಿಳಾ ಅಧ್ಯಯನ ವಿಭಾಗ
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

ಮಾರ್ಗದರ್ಶಕರು

ಪ್ರೊ ॥ ಹೇಮಲತಾ.ಎಚ್.ಎಮ್.
ಮಹಿಳಾ ಅಧ್ಯಯನ ವಿಭಾಗ
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

ಮಹಿಳಾ ಅಧ್ಯಯನ ವಿಭಾಗ
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ
ವಿಜಯಪುರ

2018–19

“ಮಂಡ್ಯ ಜಿಲ್ಲಾ ಮಹಿಳಾ ವಕೀಲರುಗಳ ಸಮಗ್ರ ಅಧ್ಯಯನ”

ಪೀಠಿಕೆ

ನಮ್ಮ ಸಮಾಜ ವ್ಯವಸ್ಥೆಯಲ್ಲಿ ‘ನ್ಯಾಯ’ ಮತ್ತು ‘ಕಾನೂನು’ ಬೇರ್ಪಡಿಸಲಗದಂಥ ಎರಡು ಪರಿಕಲ್ಪನೆಗಳು ದೇಶದ ಕಾನೂನು ತನ್ನ ಪ್ರಜೆಗಳಿಗೆ ನ್ಯಾಯವನ್ನು ದೊರಕಿಸಿಕೊಡುತ್ತದೆ ಅಥವಾ ದೊರಕಿಸಿಕೊಡಬೇಕು ಎಂಬ ಉದ್ದೇಶದಿಂದ ಕಾನೂನುಗಳನ್ನು ರೂಪಿಸಲಾಗುತ್ತದೆ. ಅನೇಕ ಬರಿ ಕಾನೂನು ರಚನೆಯಲ್ಲಿಯೇ ಮಿತಿ ಅಂತರ್ಗತವಾಗಿರುತ್ತದೆ. ಆದರೂ ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಆ ಕಾನೂನು ಊರ್ಜಿತವಾಗಿರುತ್ತದೆ. ಮನುಷ್ಯನು ಸಮಾಜ ಜೀವಿಯಷ್ಟೇ. ಇದರಿಂದಾಗಿ ಅವನಿಗೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಒಂದಲ್ಲ ಒಂದು ಸಂಬಂಧವಿದ್ದೇ ಇರುತ್ತದೆ. ಇಂತಹ ಎಲ್ಲಾ ಕ್ಷೇತ್ರಗಳಲ್ಲೂ ಕಾನೂನು ಪೂರ್ತಿಯಾಗಿ ಅಲ್ಲದಿದ್ದರೂ ಹೆಚ್ಚು ಹೆಚ್ಚಾಗಿ ಪ್ರವೇಶಿಸುತ್ತಿರುವುದನ್ನು ಕಾಣುತ್ತಿದೇವೆ. ಹುಟ್ಟು ಸಾವುಗಳ ನೋಂದಣಿಯು ಕಾನೂನಿಗೆ ಅಗತ್ಯವಾಗಿದೆ.

ಸಮಾಜವು ಹೆಚ್ಚು ಸಂಕೀರ್ಣವಾದಂತೆಲ್ಲ ಒಬ್ಬರು ಮತ್ತೊಬ್ಬರಿಂದ ತಗಾದೆ ಮಾಡಿದಂತೆಲ್ಲ ಭಿನ್ನ ಭಿನ್ನ ಹಿತಾಸಕ್ತಿಗಳಿಂದ ಇನ್ನೂ ಹೆಚ್ಚು ಹೆಚ್ಚು ಕಾನೂನುಗಳ ರಚನೆಗಾಗಿ ಒತ್ತಡವು ಬೆಳೆಯುತ್ತಲೇ ಇರುತ್ತದೆ. “ಎಲ್ಲಿ ಸಮಾಜವೋ ಅಲ್ಲಿ ಕಾನೂನು” ಇದ್ದೇ ಇರುತ್ತದೆ ಎಂಬುದು Ubi socilas ibijus ಎಂಬ ಲ್ಯಾಟಿನ್ ಕಾನೂನು ಸೂತ್ರದ ತಾತ್ಪರ್ಯವೂ ಇದೇ ಆಗಿದೆ. Law ಎಂಬ ಶಬ್ದವನ್ನು ಎರಡು ಅರ್ಥಗಳಲ್ಲಿ ಬಳಸಲಾಗುತ್ತದೆ. ಒಂದು ಸಾಮಾನ್ಯ ಅರ್ಥ ಇನ್ನೊಂದು ನ್ಯಾಯದ ಅರ್ಥ.

ಕಾನೂನಿನ ಪರಿಭಾಷೆಯಲ್ಲಿ ಪ್ರಸಿದ್ಧ ಲೇಖಕರು ಕಾನೂನಿನ ಪರಿಭಾಷೆಯನ್ನು ವಿಭಿನ್ನ ರೀತಿಯಲ್ಲಿ ಪರಿಭಾಷಿಸಿದ್ದಾರೆ. ಉದಾ : ‘ಹಾಬ್ಸ್’ ಅವರು ಯಾರಿಗೆ ತಮ್ಮ ಆದೇಶಗಳನ್ನು ಜಾರಿಗೊಳಿಸುವ, ಪಾಲಿಸಲು ಒತ್ತಾಯಪಡಿಸುವ ಅಧಿಕಾರ ಇರುತ್ತದೆಯೋ ಅವರ ಆದೇಶಗಳೇ ಕಾನೂನು ‘ಸಾಲ್ಮಂಡ್’ ಅವರ ವ್ಯಾಖ್ಯಾನವು ನ್ಯಾಯ ನಿರ್ವಹಣೆಯಲ್ಲಿ ರಾಜ್ಯವು ಮಾನ್ಯ ಮಾಡಿ ಅನ್ವಯಗೊಳಿಸುವಂಥಹ ನಿಯಮಗಳ ಸಮುದಾಯವೇ ಕಾನೂನು ‘ಇಹರಿಂಗ್’ ಬಲಹೀನವಾದ ಕಾನೂನು ಸಮ್ಮತ ನಿಯಮವು ಉರಿಯದ ಬೆಂಕಿಯಂತೆ, ಪ್ರಕಾಶವಿಲ್ಲದ ದೀಪದಂತೆ ಎಂಬುದಾಗಿಯು, ಹಾಗೆ ಕನ್ನಡದ ಪ್ರಸಿದ್ದ ಲೇಖಕ ಡಾ. ಡಿ.ವಿ.ಗುಂಡಪ್ಪ ಅವರು ತಮ್ಮ Rule of Lawದಲ್ಲಿ ಶಾಸನ ಪಾರಮ್ಯವೆಂದರೆ ಶಾಸನವೇ ಕಾಯಿದೆ, ಕಾನೂನು, ಕಟ್ಟುಪಾಡುಗಳೇ ದೇಶದಲ್ಲಿ ಎಲ್ಲಕ್ಕಿಂತ ದೊಡ್ಡ ಶಾಸನ. ಎಂಬುದಾಗಿ ಹೇಳಿದ್ದಾರೆ.

ನ್ಯಾಯಶಾಸ್ತ್ರ ಎಂಬುದು ಕಾನೂನಿನ ತತ್ವ ಹಾಗೂ ಸಿದ್ಧಾಂತವಾಗಿದೆ. ಆಧುನಿಕ ನ್ಯಾಯಶಾಸ್ತ್ರವು 18ನೇ ಶತಮಾನದಲ್ಲಿ ಆರಂಭಗೊಂಡಿದ್ದು. ಪ್ರಕೃತಿ ನಿಯಮ/ನ್ಯಾಯ, ನಾಗರಿಕ ಕಾನೂನು ಹಾಗೂ ರಾಷ್ಟ್ರಗಳ ಕಾನೂನುಗಳ ಪ್ರಾಥಮಿಕ ತತ್ವಗಳ ಮೇಲೆ ಕೇಂದ್ರಿಕೃತವಾಗಿತ್ತು. ಸಮಕಾಲಿನ ನ್ಯಾಯ ಸಿದ್ಧಾಂತವು ಸ್ಥೂಲವಾಗಿ ಎರಡು ಗುಂಪುಗಳ ಸಮಸ್ಯೆಗಳನ್ನು ಪರಿಹರಿಸುತ್ತದೆ.

➔ ಕಾನೂನು ಹಾಗೂ ಕಾನೂನು ವ್ಯವಸ್ಥೆಗಳ ಆಂತರಿಕ ಸಮಸ್ಯೆಗಳು

➡ ತಾನಿರುವ ರಾಜಕೀಯ ಹಾಗೂ ಸಾಮಾಜಿಕ ಪರಿಸ್ಥಿತಿಗೆ ಸಂಬಂಧಪಟ್ಟ ಹಾಗೆ ನಿರ್ದಿಷ್ಟ ಸಾಮಾಜಿಕ ವ್ಯವಸ್ಥೆಯ ಕಾನೂನು ಸಮಸ್ಯೆಗಳು.

Law ಎಂಬ ಆಂಗ್ಲ ಪದವು ಲ್ಯಾಟಿನ್ ಪದ ಜ್ಯೂರಿಸ್ ಪ್ರೆಡೆನ್ಸಿಯಾದ ಮೇಲೆ ಆಧರಿತವಾಗಿದೆ. 1628ರಲ್ಲಿ ಈ ಪದವನ್ನು ಪ್ರಥಮ ಬಾರಿ ದೃಢೀಕರಿಸಲಾಯಿತು.

ಮೊದಲು ಸಮಾಜದಲ್ಲಿ ಧಾರ್ಮಿಕ ನಿಯಮಗಳೇ ಆಯಾ ಸಮಾಜದ ಸ್ತ್ರೀ ಪುರುಷರ ಹಕ್ಕು ಭಾಧ್ಯತೆಗಳನ್ನು ನಿಯಂತ್ರಿಸುತ್ತಿದ್ದವು. ಧಾರ್ಮಿಕ ಮುಖಂಡರೇ ನ್ಯಾಯದಾನ ಮಾಡಿ ಕಾನೂನುಗಳಿಗೆ ಅರ್ಥ ಕೊಡುತ್ತಿದ್ದರು ಸಾಮಾನ್ಯವಾಗಿ ಬೇರೆ ಬೇರೆ ಧರ್ಮಗಳ ಸಿದ್ಧಾಂತಗಳು ಬೇರೆ ಬೇರೆಯಾಗಿರುವುದರಿಂದ ವಿವಿಧ ಧರ್ಮಗಳಲ್ಲಿ ಮಹಿಳೆಯ ಸ್ಥಾನ–ಮಾನಗಳು ಬೇರೆ–ಬೇರೆಯಾಗಿವೆ. ನಾಗರಿಕತೆ ಬೆಳೆದಂತೆ ಶಿಕ್ಷಣ ವಿಸ್ತಾರವಾದಂತೆ ಪಾಶ್ಚಿಮಾತ್ಯ ದೇಶಗಳ ಸಂಪರ್ಕ ಹೆಚ್ಚಾದಂತೆ ಜಗತ್ತಿನಲ್ಲಿ ಮಹಿಳೆಯರು ಜಾಗೃತರಾದರು. ಅಲ್ಲದೇ ಅನೇಕ ಪುರುಷರಿಗೂ ಸಹ ಮಹಿಳೆಯ ವಿರುದ್ದ ಮಾಡುವ ಪಕ್ಷಪಾತತನ ಸರಿಬರಲಿಲ್ಲಾ ಅಂಥವರಲ್ಲಿ ರಾಜರಾಮ್ ಮೋಹನ್‌ರಾಯರು ಒಬ್ಬರು. ಜಾಗೃತರಾದ ಮಹಿಳೆಯರು ಲಿಂಗ ಭೇದದ ಹೊರತಾಗಿ ಸ್ತ್ರೀ, ಪುರುಷರಲ್ಲಿ ಯಾವುದೇ ಭೇದವಿರದಿದ್ದರೂ ಕುಟುಂಬದಲ್ಲಿ ಸ್ಥಾನ–ಮಾನ ನಿರಾಕರಣೆ, ಶಿಕ್ಷಣದಿಂದ ವಂಚನೆ ಮುಂತಾದವುಗಳನ್ನು ಅವರು ವಿರೊಧಿಸಲು ಪ್ರಾರಂಭಿಸಿದರು. ಈ ಅಸಮಾನತೆ ಅತಿಯಾದಾಗ ಮಹಿಳೆಯರು ತಮಗಾದ ಅನ್ಯಾಯದ ವಿರುದ್ಧ ನ್ಯಾಯದ ಬೇಡಿಕೆ ಪ್ರಾರಂಭಿಸಿದರು. ಇದುವೆ ಸ್ತ್ರೀವಾದಿ ನ್ಯಾಯಶಾಸ್ತ್ರವಾಗಿ ಬೆಳೆಯಿತು. ಸ್ತ್ರೀಯರಿಗೆ ಸದ್ಯದ ವ್ಯವಸ್ಥೆಯ ನಿಯಮದಿಂದ ಮಹಿಳೆಗೆ ಅನ್ಯಾಯವಾಗುತ್ತದೆ. ಆದ್ದರಿಂದ ಸ್ತ್ರೀಗೆ ನ್ಯಾಯ ಸಿಗಬೇಕೆಂಬವಾದವೆ ಸ್ತ್ರೀವಾದಿ ನ್ಯಾಯಶಾಸ್ತ್ರ.

ವಕೀಲರೆಂದರೆ ಯಾರು ವಕೀಲರ ಆಯ್ಕೆಯ ಪ್ರಕ್ರಿಯೆಯನ್ನು ನೋಡಿದಾಗ ಸಂಸ್ಕೃತದಲ್ಲಿ 'ವೆಚ್ ಧಾತುವಿದೆ ಅರ್ಥ 'ಹೇಳು' ಎಂದು ವಕ್ತ್ಯ ಅಂದರೆ ಮಾತನಾಡುವವರು ವಕ್ತೃತ್ವ ಎಂದರೆ ವಕೀಲಿ ಅಥವಾ ವಕಾಲತ್ತು ವಕಾಲತ್ತಿನಲ್ಲಿರುವ 'ತ್' ಪ್ರತ್ಯೆಯವು ಸಂಸ್ಕೃತದ 'ತ್ವ' ಪ್ರತ್ಯೇಯದ ಸಂವಾದಿ ತುರ್ಕಿ ಭಾಷೆಯಲ್ಲಿ ವಜೀರ್ ಇದೆ ಅದು ವೆಚ್‌ನ ಇನ್ನೊಂದು ವೈತ್ವನ್ನು ಅವನು ಮಂತ್ರಿ ಅಂದರೆ ಮಾತನಾಡುವವನು. ಇಂಗ್ಲೀಷಿನ ವೊಕಾಟ್ ಲ್ಯಾಟಿನಿನ ವೋಕೇರ್‌ಗಳು ಈ ವಾಚಕ್‌ದ ಜ್ಞಾತಿಗಳು ಅಡ್ವೋಕೇಟ್ ಅಂದರೆ ವಕೀಲ ಅದರಲ್ಲಿ ವಚ್ ಇದೆ ವೊಕೇಬ್ಯುಲರಿ ಎಂದರೆ ಶಬ್ಧ ಸಂಗ್ರಹ ಆಡುವ ನುಡಿಗಳ ಗುಂಪು.

ಒಬ್ಬ ವ್ಯಕ್ತಿಯಿಂದಾಗಿ, ಸಂಘ ಸಂಸ್ಥೆ, ಸರ್ಕಾರದಿಂದಾಗಲಿ ಯಾರೇ ಒಬ್ಬ ಪ್ರಜೆ ಅನ್ಯಾಯಕ್ಕೊಳಗಾದರೆ ಆತನು ನ್ಯಾಯ, ನೀತಿ, ನಿಯಮಾವಳಿಗಳ ಪ್ರಕಾರ ತಾನೇ ವಾದ ಮಾಡಲು ಸಾಧ್ಯವಿಲ್ಲ. ಇದಕ್ಕಾಗಿ ಕಾದು ಕುಳಿತಿರುವ ವಕೀಲರೊಬ್ಬರ ಸಹಾಯಬೇಕು. ಅದು ಮಹಿಳಾ ವಕೀಲರಾದರೂ ಸರಿ ಅಥವಾ ಪುರುಷ ವಕೀಲರಾದರೂ ಸರಿ ಯಾರಾದರೂ ನ್ಯಾಯಾಲಯಕ್ಕೆ ಒಂದೇ. ಆದರೆ ಭಾರತದಲ್ಲಿ 16 ಲಕ್ಷ ಲಾಯರ್‌ಗಳು ಬಾರ್ ಕೌನ್ಸಿಲ್‌ನಲ್ಲಿ ನೋಂದಣಿ ಮಾಡಿಸಿಕೊಂಡಿದ್ದಾರೆ. ಅದರಲ್ಲಿ 10:15% ರಷ್ಟು ಮಾತ್ರ ಮಹಳೆಯರಿದ್ದಾರೆ. ಭಾರತದ ಕೋರ್ಟ್‌ಗಳು 1924ರ ವರೆಗೂ ಮಹಿಳೆಯರಿಗೆ ತಮ್ಮ ಬಾಗಿಲು ಮುಚ್ಚಿಕೊಂಡಿದ್ದವು. ನ್ಯಾಯವಾದಿಗಳ ಸಹಾಯಕರಾಗಿ ಮಹಿಳಾ ಬ್ಯಾರಿಸ್ಟರುಗಳು ಕೆಲಸ ಮಾಡಿಕೊಡಬಹುದಿತ್ತೇ ವಿನಹ ಕೋರ್ಟ್‌ನೊಳ ಹೊಕ್ಕು ವಾದಿಸುವಂತಿರಲಿಲ್ಲ. ಭಾರತದ ಮೊದಲ ಬ್ಯಾರಿಸ್ಟರ್ ಮಹಿಳೆ –1894 ರಲ್ಲಿ ಇಂಗ್ಲೇಂಡಿನ ಆಕ್ಸ್‌ಫರ್ಡ್‌ನಲ್ಲಿ ಪದವಿ

ಪಡೆದರೂ ಕೋರ್ಟ್ ಪ್ರವೇಶಿಸಲು 30 ವರ್ಷ ಕಾಯಬೇಕಾಯಿತು. ಕಾನೂನು ಅಭ್ಯಾಸಿಸಿ ಪದವಿ ಪಡೆದಿದ್ದರೂ ಹೆಣ್ಣು ಎಂಬ ಕಾರಣಕ್ಕೆ ಅವರ ಜ್ಞಾನ ಬುದ್ದಿ ಮತ್ತೆ ದಂಡವೆನನಿಸಿತ್ತು. ಹಿಂದೂ ಸಮಾಜದ ಕೆಲವು ಪ್ರದೇಶ ಪಂಗಡಗಳ ಮಹಿಳೆಯರು ಪದ್ಮ ಅನುಸರಿಸುತ್ತಿದ್ದರು. ಅವರಲ್ಲಿ ಪದ ಹಿಂದೆಯೇ ಇದ್ದ ಅನಕ್ಷರಸ್ಥರು ಮನೆಯ ಕೆಲ ಪುರುಷರನ್ನು ಬಿಟ್ಟರೆ ಬೇರೆ ಗಂಡಸರನ್ನು ನೋಡುವಂತಿರಲಿಲ್ಲ. ಏನೇ ವ್ಯವಹಾರ ಮಾಡುವುದಾದರೂ ಅವರ ಪರವಾಗಿ ಒಬ್ಬ ಗಂಡಸು ಇದ್ದರಷ್ಟೇ ಅದು ಊರ್ಜಿತವಾಗುತ್ತಿತ್ತು. ಅವರ ಹಲವು ಹಕ್ಕುಗಳು ಹೆಣ್ಣು ಎಂಬ ಕಾರಣಕ್ಕೆ ಮೊಟಕುಗೊಳ್ಳುತ್ತಿದ್ದವು. ಇವೆಲ್ಲವನ್ನು ಮೀರಿ 1889 ರಲ್ಲಿ ಕಾರ್ನೆಲಿಯ ಸೊರಾಬ್ಜಿ ಮುಂಬಯ್ ವಿಶ್ವವಿದ್ಯಾಲಯದಲ್ಲಿ ಬಿ.ಎ. ಪದವಿ ಪಡೆದು ದೇಶದ ಕಾನೂನು ಪದವೀಧರೆ ಹಾಗೂ ಆಕ್ಸ್‌ಫರ್ಡ್ ಕಾನೂನು ಶಾಲೆ ಪ್ರವೇಶಿಸಿದ ಮೊತ್ತ ಮೊದಲ ವಕೀಲೆ ಎಂಬ ಹೆಗ್ಗಳಿಕೆಗೂ ಪಾತ್ರಳಾದರೂ. ಇಷ್ಟೇಲ್ಲಾ ಅಡೆ–ತಡೆಗಳು ಇದ್ದರೂ ಭಾರತದಲ್ಲಿ ಸೂಪರ್ ವಕೀಲರು ಆಗಿರುವ ಮಹಿಳೆರೆಂದರೆ ವೃಂದಾಗ್ರೋವರ್, ಮೀನಾಕ್ಷಿ ಅರೋರಾ, ಇಂದಿರಾ ಜೈಸಿಂಗ್, ಪಿಂಕಿ ಆನಂದ್, ಕರುಣಾನಂಡಿ, ಪ್ಲಾವಿಯಾ ಆಗ್ನೇಸ್, ಮೀನಾಕ್ಷಿ, ಲೇಖಿ, ಜಿಯ ಮೂಡಿ, ಮೊನಕಾ ಗುರುಸ್ವಾಂಇ, ಇವರುಗಳೆಲ್ಲ ತಮ್ಮ ದಿಟ್ಟ ಹೋರಾಟದ ಪ್ರಯತ್ನದಿಂದ ಸೂಪರ್ ಮಹಿಳಾ ವಕೀಲರಾಗಿದ್ದಾರೆ ಇದರ ಜೊತೆಗೆ ಸುಪ್ರೀಂಕೋರ್ಟ್ 29ನೇ ಮಾರ್ಚ್ 2019ರಂದು 37 ಜನ ಸೀನಿಯರ್ ವಕೀಲರುಗಳನ್ನು ಆಯ್ಕೆ ಮಾಡಿದ್ದು ಅದರಲ್ಲಿ 6 ಜನ ಮಹಿಳಾ ವಕೀಲರುಗಳು ಸೀನಿಯರ್ ಹುದ್ದೆಗೆ ಅಲಂಕರಿಸಿದ್ದಾರೆ.

ಇನ್ನು ಕರ್ನಾಟಕದಲ್ಲಿ ಕಾನೂನು ಕ್ಷೇತ್ರದಲ್ಲಿ ಮೊದಲ ಹೆಜ್ಜೆ ಇಟ್ಟ ಪ್ರಮುಖ ಮಹಿಳಾ ನ್ಯಾಯವಾದಿಗಳ ಬಗ್ಗೆ ಕಿರುಪರಿಚಯ ನೋಡುವುದಾದರೆ ಕರ್ನಾಟಕ ಬಾರ್ ಕೌನ್ಸಿಲ್‌ನಲ್ಲಿ ನೋಂದಯಿಸಿದ ಮೊದಲ ಮಹಿಳಾ ನ್ಯಾಯವಾದಿಯಾಗಿ 1921ರಲ್ಲಿ ಕಂಡು ಬಂದಿರುವ ಹೆಸರು, ಗುಲಬರ್ಗಾ ಜಿಲ್ಲೆಯ ಶ್ರೀಮತಿ ಕಸ್ತೂರಿ ಎಂಬುದು ಹೆಮ್ಮೆಯ ಸಂಗತಿ. ಆದರೂ ಇವರೆಲ್ಲರ ಹಾದಿಯು ಸುಗಮವಾಗಿರಲಿಲ್ಲ. ನ್ಯಾಯವಾದಿಗಳ ವೃತ್ತಿ ಆರಂಭದಿಂದಲೂ ಪುರುಷರ ಏಕಸ್ವಾಮ್ಯದಲ್ಲಿತ್ತು. ಕಾನೂನು ಶಿಕ್ಷಣ ಪಡೆಯಲು ಬೇರೆ ದೂರದ ಊರುಗಳಿಗೆ ಹೋಗಬೇಕಾಗಿದುದ್ದು, ನ್ಯಾಯಾದಿಗಳ ವೃತ್ತಿ ಕೈಗೊಳ್ಳಲು ಮೀಸಲಿಡಬೇಕಾದ ದೈನಂದಿನ ಸಮಯ ಮಹಿಳೆಯರು ಈ ಕ್ಷೇತ್ರದಲ್ಲಿ ಕಾಲಿಡಲು ಅಡ್ಡಿಯಾದ ಆಡಚಣೆಗಳಾಗಿದ್ದವು. ಹಾಗಾಗಿಯೇ ಬಹಳ ಕಾಲದವರೆಗೆ ಅವಿವಾಹಿತ ಅಥವಾ ಕೌಟುಂಬಿಕ ಜೀವನದಿಂದ ವಂಚಿತರಾದ ಮಹಿಳೆಯರು ಮಾತ್ರ ಈ ವೃತ್ತಿಯಲ್ಲಿ ಉಳಿಯಲು ಸಾಧ್ಯ ಎಂಬ ಬಲವಾದ ನಂಬಿಕೆ ಇತ್ತೀಚಿನವರೆಗೆ ಉಳಿದಿತ್ತು. ಮಹಿಳೆಯರು ಕಾನೂನು ಶಿಕ್ಷಣ ಪಡೆದರೂ, ಈ ವೃತ್ತಿಗೆ ಬರುವವರ ಸಂಖ್ಯೆ ಬಹಳ ಕಡಿಮೆ ಇತ್ತು. ಹಾಗು ಶಿಕ್ಷಣ ಕೈಗೊಂಡವರಲ್ಲಿಯೂ ಹೆಚ್ಚಿನ ಮಹಿಳೆಯರು ಮದುವೆಯಾಗುವವರೆಗೆ ಮಾತ್ರ ವೃತ್ತಿ ನಿರತರಾಗಿದ್ದು, ಮದುವೆಯ ನಂತರ ವೃತ್ತಿಯನ್ನು ತ್ಯಜಿಸುವುದು ಇತ್ತೀಚಿನವರೆಗೆ ಸಾಮಾನ್ಯವಾಗಿ ಹೋಗಿದೆ. ಇದಕ್ಕೆಲ್ಲಾ ಪ್ರಮುಖ ಕಾರಣಗಳು ನ್ಯಾಯಾಂಗ ಕ್ಷೇತ್ರವು ಎಂದೂ ಪುರುಷ ಪ್ರಧಾನವಾದುದೇ ಆಗಿದೆ. ಶಾಸನಕಾರರಿಂದ ಹಿಡಿದು ನ್ಯಾಯವಾದಿಗಳಾಗಿ, ನ್ಯಾಯಮುರ್ತಿಗಳಾಗಿ ಬಹುಸಂಖ್ಯೆಯಲ್ಲಿ ಗೋಚರಿಸುವವರು ಪುರುಷರೇ ಮಹಿಳೆಯರ ಸಂಖ್ಯೆ ಇತ್ತೀಚೆಗೆ ಈ ಪುರುಷ ಜಗತ್ತಿನಲ್ಲಿ ಹೆಚ್ಚುತ್ತಿದ್ದರೂ ನಾಲ್ಕು ದಶಕಗಳ ಹಿಂದೆ ಹೋಲಿಸಿದಾಗ ನ್ಯಾಯಾಂಗ ಕ್ಷೇತ್ರದಲ್ಲಿ ಇವತ್ತಿಗೂ ಮಹಿಳೆಯರು ಅತ್ಯಂತ ವಿರಳವಾಗಿ ಕಾಣಿಸುತ್ತಿದ್ದಾರೆ. ಕಾನೂನು ಪದವಿಯನ್ನು ಹೊಂದಿದರೂ, ಸ್ವತಂತ್ರವಾಗಿ ಅಥವಾ ಸಂಸ್ಥೆಗಳಲ್ಲಿ ನ್ಯಾಯವಾದಿಯಾಗಿ ದುಡಿಯುವ ಮಹಿಳೆಯರ ಸಂಖ್ಯೆ ಸಾಕಿಷ್ಟಿಲ್ಲವೆನ್ನುವುದು ಈ ಕ್ಷೇತ್ರದ ಪ್ರವೇಶದಲ್ಲಿ ಮಹಿಳೆಯರಿಗೆ ಇರುವ ತಡೆಯನ್ನು ಸೂಚಿಸುವ ಒಂದು ಅಂಶವಾಗಿದೆ. ಇವೆಲ್ಲದರ ನಡುವೆಯು ನಮ್ಮ ಕರ್ನಾಟಕದಲ್ಲಿ ಒಳ್ಳೆಯ ಹೆಸರು ಗಳಿಸಿರುವಂತಹ ಮಹಿಳಾ

ವಕೀಲೆಯರ ಸಂಖ್ಯೆಯನ್ನು ಕಡಿಮೆ ಇಲ್ಲ. ಉದಾ : ಹೇಮಲತಾ ಮಹಿಷಿ, ಪ್ರಮಿಳಾ ನೇಸರ್ಗಿ, ಬಾನುಮುಸ್ತಕ್ ಇವರೆಲ್ಲರೂ ಕಾನೂನು ಕ್ಷೇತ್ರದಿಂದ ಹಿಡಿದು ಸಾಹಿತ್ಯದವರೆವಿಗೂ ತಮ್ಮದೆ ಆದ ಛಾಪು ಮೂಡಿಸಿದ್ದಾರೆ.

ಅಧ್ಯಾಯನದ ಅಗತ್ಯ

ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಎಷ್ಟೇ ವಿದ್ಯಾವಂತೆಯಾದರೂ, ಎಲ್ಲ ಕ್ಷೇತ್ರಗಳಲ್ಲೂ ಸರಿಸಮಾನವಾಗಿ ಕಾರ್ಯನಿರ್ವಹಿಸುತ್ತಿದ್ದರೂ. ಆಕೆ ಇಂದಿಗೂ ತಾರತಮ್ಯವನ್ನು ಎದುರಿಸುತ್ತಿದ್ದಾಳೆ. ಆಕೆಯ ಅಭಿವೃದ್ಧಿ ನಿಧಾನಗತಿಯಲ್ಲೇ ಇದೆ. ಕಾನೂನು ಮಹಿಳಾ ಪರವಾಗಿದ್ದರೂ ಆಕೆಗೆ ಅದು ರಾಜಮಾರ್ಗವಾಗಿಲ್ಲ. ಇವತ್ತಿಗೂ ಓದು ಮುಗಿಸಿ ನೂರಾರು ಕನಸುಗಳೊಂದಿಗೆ ನಾನಾಹಂತದ ಕೋರ್ಟುಗಳನ್ನು ಪ್ರವೇಶಿಸಿ ತಮ್ಮನ್ನು ಸ್ಥಾಪಿಸಿಕೊಳ್ಳಬಯಸುವ ವಕೀಲೆಯರಿಗೆ ಪರಿಸ್ಥಿತಿ ಪೂರಕವಾಗಿಯೆನು ಇಲ್ಲ. ಪುರುಷ ವೃತ್ತಿ ಭಾಂಧವರಿರಲಿ, ಹೈಕೋರ್ಟ್‌ನೊಳಗಿನ ನ್ಯಾಯಾಧೀಶಿರಿರಲಿ, ಕೊನೆಗೆ ಕಕ್ಷಿದಾರರಿರಲಿ ಹೆಚ್ಚಿನವರು ಮಹಿಳಾ ಲಾಯರ್‌ಗಳ ಬಗ್ಗೆ ಅಸಡ್ಡೆ, ಅಸಮ್ಮತಿ ಅವರ ಸಾಮರ್ಥ್ಯ ಕುರಿತು ಅನುಮಾನ ಪೂರ್ವ ಗ್ರಹಗಳನ್ನೇ ಹೊಂದಿದ್ದಾರೆ. ಕಾನೂನು ಶಾಲೆ ಕಾಲೇಜುಗಳಲ್ಲಿ ಸಾಕಷ್ಟು ಸಂಖ್ಯೆಯ ಹೆಣ್ಣು ಮಕ್ಕಳು ಕಾನೂನು ಪದವಿ ಪಡೆದು ವೃತ್ತಿ ಆರಂಭಿಸಿದರು. ಸ್ವತಂತ್ರವಾಗಿ ವೃತ್ತಿ ನಿರತರಾಗುವವರ ಸಂಖ್ಯೆ ಕಡಿಮೆ ಅದರಲ್ಲೂ ಧೀರ್ಘಾವದಿಯವರೆಗೆ ವೃತ್ತಿ ಮುಂದುವರೆಸುತ್ತಿರುವವರು ಅತಿ ಕಡಿಮೆ.

ನ್ಯಾಯಧೀಶರ ಸ್ಥಳದಲ್ಲಿ ಮಹಿಳೆಯರ ಸಂಖ್ಯೆ ಮತ್ತಷ್ಟು ಕಡಿಮೆ ಇದೆ. ಬಾರ್ ಅಸೋಷಿಯನ್ನಿಂದ ಯಶಸ್ವಿ ವಕೀಲೆಯರು ನ್ಯಾಯಾಧೀಶರ ಸ್ಥಾನಕ್ಕೆ ಶಿಫಾರಸ್ಸುಗೊಳ್ಳುವುದೇ ಕಡಿಮೆ ಇವತ್ತಿನ ಸಮಾಜಕ್ಕೆ ಹೆಣ್ಣಿನ ಶಕ್ತಿ ಸಾಮರ್ಥ್ಯ ಜ್ಞಾನದಲ್ಲಿ ನಂಬಿಕೆಯೇ ಇಲ್ಲವಾಗಿದೆ. ಒಂದು ಹೆಣ್ಣನ್ನು ಅಸಡ್ಡೆಯಿಂದ ಕಾಣುವುದು ಅಥವಾ ಅವರನ್ನು ತಮ್ಮ ರಕ್ಷಣಾ ಕೋಟೆಯೊಳಗೆ ತೆಗೆದುಕೊಂಡು ಪೊರೆಯುವುದು. ಇವೆರಡರಲ್ಲಿ ಒಂದು ಮಾತ್ರ ಹೆಣ್ಣಿನ ಕುರಿತು ಗಂಡಿಗಿರುವ ಸಾಮಾನ್ಯ, ಧೋರಣೆ ಅದರಾಚೆಗೆ ಸ್ನೇಹ, ಸಮಾನತೆ, ಸಮಾನ ಗೌರವದ ನೆಲೆಯಲ್ಲಿ ಸಹಬಾಳ್ವೆ ರೂಪಿಸುವುದು ಅವಶ್ಯಕವಾಗಿದೆ. ವಕೀಲಿಯೋ, ವೈದ್ಯಕೀಯವೋ, ರಾಜಕರಣವೋ, ಚಳುವಳಿಯೋ ಎಲ್ಲಾ ಕಡೆ ಮಹಿಳಾ ಪರ ದೃಷ್ಠಿಕೋನದಿಂದ ನೋಡುವಂತಹ ಮಹಿಳಾ ವಕೀಲರುಗಳ ಅಗತ್ಯತೆಯು ಬಹಳ ಮುಖ್ಯವಾಗಬೇಕಿದೆ. ಮಹಿಳಾ ಭಾಗವಹಿಸುವಿಕೆಗೆ ಅವಕಾಶ ಮತ್ತು ಸಮಾನ ಗೌರವ ಇವತ್ತಿನ ತುರ್ತಾಗಿದೆ.

ಅಧ್ಯಯನದ ಉದ್ದೇಶಗಳು

- ಕಾನೂನು ಅಧ್ಯಯನ ಮತ್ತು ವಕೀಲ ವೃತ್ತಿಯಲ್ಲಿ ಮಹಿಳೆಯರ ಸಂಖ್ಯೆ ಕಡಿಮೆ ಇರುವುದರ ಬಗ್ಗೆ ಪರಿಶೀಲನೆ.
- ಮಹಿಳಾ ವಕೀಲರ ವೈಯಕ್ತಿಕ ಮತ್ತು ವೃತ್ತಿ ಜೀವನದ ಸಂಘರ್ಷದ ಬಗೆಗೆ ಕೂಲಂಕಷವಾಗಿ ಚರ್ಚಿಸುವುದು.
- ಮಹಿಳೆ ಮತ್ತು ಪುರುಷ ವಕೀಲರುಗಳ ಬಗೆಗಿನ ತೌಲನಿಕ ಅಧ್ಯಯನವನ್ನು ಕೈಗೊಳ್ಳುವುದು.

- ಮಹಿಳಾ ವಕೀಲರುಗಳು ಪ್ರಕರಣಗಳನ್ನು ನಿರ್ವಹಣೆ ಮಾಡುವುದರಲ್ಲಿ ಮಹಿಳಾ ಪರ ದೃಷ್ಟಿಕೋನ ಇಟ್ಟುಕೊಂಡಿರುವುದರ ಬಗೆಗಿನ ಪರೀಶೀಲನೆ

- ಇಡೀ ವಕೀಲೀ ವೃತ್ತಿಯನ್ನು ಜಂಡರ್ ಆಯಾಮದಿಂದ ನೋಡುವುದು.

ಅಧ್ಯಯನದ ಮಹತ್ವ

ಮಂಡ್ಯ ಜಿಲ್ಲಾ ಮಹಿಳಾ ವಕೀಲರ ಸಮಗ್ರ ಅಧ್ಯಯನದ ಮಹತ್ವ" ಎಂಬ ಪ್ರಸ್ತುತ ಅಧ್ಯಯನವು ಮಂಡ್ಯ ಜಿಲ್ಲೆಯ ಮಹಿಳಾ ವಕೀಲರ ಕುರಿತಾಗಿದೆ. ಮಹಿಳಾ ಕಾನೂನು ಮತ್ತು ಕಾನೂನು ಕ್ಷೇತ್ರದ ಮಹಿಳೆಯರ ಒಂದು ವ್ಯವಸ್ಥಿತ ಅಧ್ಯಯನ ಇದಾಗಿದ್ದು ಕಾನೂನು ಶಿಕ್ಷಣದಲ್ಲಿ ಮತ್ತು ವೃತ್ತಿ ವಲಯದಲ್ಲಿ ಮಹಿಳೆಯರ ಅವಶ್ಯಕತೆಯನ್ನು ಮನದಟ್ಟು ಮಾಡುವುದು ಹಾಗೂ ಮಹಿಳೆಯರಿಗೆ ಕಾನೂನು ವಲಯದತ್ತ ಆಸಕ್ತಿ ತೋರುವಂತೆ ಹಾಗೂ ಅವರ ನೈತಿಕ ಜವಾಬ್ದಾರಿಯ ಬಗ್ಗೆ ಅರಿವು ಮೂಡಿಸುವುದು.

ಮಹಿಳಾ ನ್ಯಾಯವಾದಿಗೆ ವೃತ್ತಿ ಪರ ಬದುಕು ಇನ್ನೂ ಕನಿಷ್ಠ ಮಟ್ಟದ ಸಹನೀಯ ಸ್ಥಿತಿಗೂ ತಲುಪದಿರುವುದು ವಿಪರ್ಯಾಸ. ನೂರರು ಮಹಿಳೆಯರಿಗೆ ಸ್ಫೂರ್ತಿಯಾಗಿರುವ ಮಹಿಳಾ ನ್ಯಾಯಾಧೀಶರು, ನ್ಯಾಯವಾದಿಗಳು ತಮ್ಮ ವೃತ್ತಿ ಆರಂಭದ ದಿನಗಳ ಏರು-ಪೇರುಗಳನ್ನು ಕಂಡ ಕಷ್ಟಗಳನ್ನು ಮತ್ತು ಅವುಗಳನ್ನು ಎದುರಿಸಿ ಯಶಸ್ಸನ್ನು ಪಡೆದುಕೊಂಡಿರುವಂತಹ ಮಹಿಳೆಯರ ಬಗೆಗಿನ ಅಧ್ಯಯನವೂ ಸಹ ಬಹಳ ಮಹತ್ವದ್ದಾಗಿದೆ.

ಮಹಿಳಾ ವಕೀಲರುಗಳ ಸಾಮಾಜಿಕ, ಆರ್ಥಿಕ ಸ್ಥಿತಿ-ಗತಿಗಳನ್ನು ತಿಳಿಯುವ ನಿಟ್ಟಿನಲ್ಲಿ ಮಹಿಳಾ ದೃಷ್ಟಿಕೋನದಿಂದ ನೋಡುವುದಾದರೆ ಈ ಅಧ್ಯಯನವು ಮಹತ್ವದಾಗಿರುತ್ತದೆ.

ಅಧ್ಯಯನದ ಕ್ಷೇತ್ರ

ಮಂಡ್ಯ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು 1.4.1965ರಲ್ಲಿ ಸ್ಥಾಪನೆಗೊಂಡಿದೆ. ನ್ಯಾಯಾಲಯಗಳು ಮಂಡಯ್ ನಗರದ ಒಂದು ಅವಿಭಾಜ್ಯ ಪ್ರದೇಶದಲ್ಲಿದೆ. ಇದು ಬಹುತೇಕ ಸರ್ಕಾರಿ ಕಛೇರಿಗಳನ್ನು ಸುತ್ತಲೂ ಹೊಂದಿದೆ. ಅವುಗಳೆಂದರೆ ಜಿಲ್ಲಾ ಕಛೇರಿ, ಎಸ್.ಪಿ.ಕಛೇರಿ, ಜಿಲ್ಲಾ ಪಂಚಾಯತ್ ಕಛೇರಿ, ಖಜಾನೆ, ತಹಶೀಲ್ದಾರ್ ಕಛೇರಿ, ಸಬ್ ರಿಜಿಸ್ಟರ್ ಕಛೇರಿ, ಆರ್.ಟಿ.ಓ. ಎಕ್ಸ್ ಆಫೀಸ್ ಇತ್ಯಾದಿ ಕಛೇರಿಗಳಿವೆ.

ಮಂಡ್ಯ ಜಿಲ್ಲೆಯಲ್ಲಿ 22 ಕೋರ್ಟ್‌ಗಳಿದ್ದು 32 ಹೋಬಳಿಗಳಿರುತ್ತವೆ. ಹಾಗೆಯೇ ಒಟ್ಟಾರೆ ಗ್ರಾಮಗಳು 1559 ಗ್ರಾಮಗಳಿರುತ್ತವೆ. 34 ಜನ ಜ್ಯುಡಿಷಿಯಲ್ ಆಫೀಸರುಗಳಲ್ಲಿ 7 ಜನ ಮಾತ್ರ ಮಹಳೆಯರಿದ್ದಾರೆ.

- ಮಂಡ್ಯದಲ್ಲಿ ಒಟ್ಟು 12 ಕೋರ್ಟ್ 5 ಹೋಬಳಿ 183 ಗ್ರಾಮಗಳು
- ಕೆ.ಆರ್.ಪೇಟೆ ಒಟ್ಟು 2 ಕೋರ್ಟ್ 6 ಹೋಬಳಿ 316 ಗ್ರಾಮಗಳು
- ಮದ್ದೂರು ಒಟ್ಟು 6 ಕೋರ್ಟ್ 4 ಹೋಬಳಿ 164 ಗ್ರಾಮಗಳು
- ಮಳವಳ್ಳಿ ಒಟ್ಟು 3 ಕೋರ್ಟ್ 4 ಹೋಬಳಿ 186 ಗ್ರಾಮಗಳು

- ನಾಗಮಂಗಲ ಒಟ್ಟು 2 ಕೋರ್ಟ್ 5 ಹೋಬಳಿ 367 ಗ್ರಾಮಗಳು
- ಪಾಂಡವಪುರ ಒಟ್ಟು 3 ಕೋರ್ಟ್ 3 ಹೋಬಳಿ 171 ಗ್ರಾಮಗಳು
- ಶ್ರೀರಂಗಪಟ್ಟಣ ಒಟ್ಟು 5 ಕೋರ್ಟ್ 3 ಹೋಬಳಿ 174 ಗ್ರಾಮಗಳು

ನಮೂನೆ ಆಯ್ಕೆ

ಪ್ರಸ್ತುತ ಅಧ್ಯಯನವು 7 ತಾಲ್ಲೋಕುಗಳಿಗೆ ಮಾತ್ರ ಸೀಮಿತವಾಗಿದೆ. ಒಟ್ಟು ಮಂಡ್ಯ ಜಿಲ್ಲೆಯ 7 ತಾಲ್ಲೋಕುಗಳಲ್ಲಿನ 1000 ವಕೀಲರನ್ನು ಸಂದರ್ಶಿಸಲಾಗುವುದು. ಸರಿ ಸುಮಾರು 7 ತಾಲ್ಲೂಕುಗಳಲ್ಲಿ ಒಟ್ಟು 400 ರಿಂದ 500 ಜನ ಮಹಿಳಾ ವಕೀಲರುಗಳು ಇರುವುದಾಗಿಯು ಅದರಲ್ಲಿ ಮಂಡ್ಯ ನ್ಯಾಯಾಲಯದಲ್ಲಿನ ಒಟ್ಟು ವಕೀಲರ ಸಂಖ್ಯೆ 1016 ಇದ್ದು ಅದರಲ್ಲಿ ಮಹಿಳಾ ವಕೀಲರುಗಳು ಕೇವಲ 247 ಮಂದಿ ಮಾತ್ರ ನೊಂದಣಿಯಲ್ಲಿ ಇರುತ್ತಾರೆ. ಅದರಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ವಕೀಲರ ಸಂಖ್ಯೆ 90 ರಿಂದ 95ರ ಗಡಿಯನ್ನು ದಾಟುತ್ತಿಲ್ಲ. ಹಾಗಾಗಿ ಒಟ್ಟು ತಾಲ್ಲೋಕುಗಳಲ್ಲಿ 500 ಜನ ಮಹಿಳಾ ವಕೀಲರುಗಳು 500 ಜನ ಪುರುಷ ವಕೀಲರುಗಳನ್ನು ತೌಲನಿಕ ಅಧ್ಯಯನ ಮಾಡಲಾಗುತ್ತದೆ.

ಸಂಶೋಧನಾ ವೈಧಾನಿಕತೆ ಅಥವಾ ವಿಧಾನ

ಈ ಅಧ್ಯಯನವು ಸ್ತ್ರೀವಾದಿ ಸಂಶೋಧನಾ ವೈಧಾನಿಕತೆಯನ್ನು ಅಳವಡಿಸಿಕೊಂಡು ಕೈಗೊಳ್ಳಲಾಗುವುದು ಮಹಿಳಾ ವಕೀಲರುಗಳು ಎದುರಿಸುತ್ತಿರುವ ಸಮಾಜದ ವಕ್ರದೃಷ್ಟಿ, ಇಬ್ಬಗೆತನ ಇವುಗಳೆಲ್ಲವನ್ನು ಕುರಿತು ಭಿನ್ನ ಆಯಮಗಳೊಂದಿಗೆ ವಿವರಣಾತ್ಮಕವಾಗಿ, ವಿಶ್ಲೇಷಣಾತ್ಮಕವಾಗಿ ವಿಮರ್ಶಾತ್ಮಕವಾಗಿ "ಸ್ತ್ರೀವಾದಿ ದೃಷ್ಟಿಕೋನದ ಹಿನ್ನೆಲೆಯಲ್ಲಿ" ಆಳವಾದ ಅಧ್ಯಯನ ನಡೆಸುವುದು.

ಅವಲೋಕನ ವಿಧಾನ

ಮಹಿಳಾ ವಕೀಲರುಗಳ ವಾಸ್ತವ ಚಿತ್ರಣವನ್ನು ಅರಿಯಲು ಅವರು ಕೆಲಸ ಮಾಡುವ ಸ್ಥಳಕ್ಕೆ ಭೇಟಿ ನೀಡಿ ಸಹಭಾಗಿತ್ವ ಅವಲೋಕನದ ವಿಧಾನವನ್ನು ಈ ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗುವುದು.

ಪ್ರಕರಣ ಅಧ್ಯಯನ

ವಿವಿಧ ಹಂತಗಳಲ್ಲಿ ಮಹಿಳಾ ವಕೀಲರುಗಳು ಹೇಗೆ ತಮ್ಮ ವಕೀಲಿ ಜೀವನ ನಡೆಸಿಕೊಂಡು ಬಂದಿದ್ದಾರೆ? ಅದರಲ್ಲಿನ ಏಳು ಬೀಳುಗಳಾವುವು? ಮನೆಯ ಆವರಣದೊಳಗೆ ಮಹಿಳೆಯರು ಎದುರಿಸುವ ಪ್ರಶ್ನೆಗಳನ್ನು ವ್ಯಕ್ತಿ ಸಮಸ್ಯೆಗಳಿಂದಲೂ, ಮನೆಯ ಹೊರಗೆ ಕಾಲಿಟ್ಟಾಗ ಅವರು ಎದುರಿಸುವ ಪ್ರಶ್ನೆಗಳನ್ನು ಸಮುದಾಯ ಸಮಸ್ಯೆಗಳೆಂದೂ ಬಹುಸ್ಥೂಲವಾಗಿ ಗುರುತಿಸುವುದು. ಅವರ ಕೌಟುಂಬಿಕ ಹಾಗೂ ಸಾಮಾಜಿಕ ಜೀವನದಲ್ಲಿ ಇದರಿಂದಾದ ಪರಿಣಾಮಗಳೇನು ಎಂದು ಅರಿಯಲು ಮಹಿಳಾ ವಕೀಲರ ಪ್ರಕರಣ ಅಧ್ಯಯನಗಳು ನೆರವಾಗುತ್ತವೆ.

ಮಹಿಳಾ ಸಮಸ್ಯೆಯನ್ನು ಸಮಗ್ರವಾಗಿ ಗ್ರಹಿಸಲು ವಿಶಿಷ್ಠ ವಿಧಾನಗಳಲ್ಲಿ ಪ್ರಕರಣಗಳನ್ನು ಕಲೆಹಾಕುವುದು ನೇರ ಸಂದರ್ಶನಗಳು, ಅನುಭವ ಕಥನಗಳು ಮಾತ್ರವಲ್ಲದೆ, ಜೀವನ ಚರಿತ್ರೆಗಳು ಅಥವಾ ಎಲ್ಲೋ ವರದಿಯಾದ ಘಟನೆಗಳನ್ನು ಕೂಡ ಪ್ರಕರಣಗಳಿಗಾಗಿ ಜೋಡಿಸಿಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿದೆ.

ಪಶ್ನಾವಳಿ

ವಕೀಲರೊಂದಿಗಿನ ಪ್ರಶ್ನಾವಳಿ ಮತ್ತು ವಿಮರ್ಶಾತ್ಮಕ ಚರ್ಚೆಯನ್ನು ಈ ಅಧ್ಯಯನಕ್ಕೆ ಅಳವಸಲಾಗುವುದು.

ಸಾಹಿತ್ಯಾವಲೋಕನ

ಮಂಡ್ಯ ಜಿಲ್ಲಾ ಮಹಿಳಾ ವಕೀಲರುಗಳ ಸಮಗ್ರ ಅಧ್ಯಯನ ಎಂಬ ವಿಷಯಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ಅವಲೋಕನ ಮಾಡಿದಾಗ ವಿವಿಧ ಮಾಹತಿಗಳು ದೊರೆಯುತ್ತವೆ.

"ಕಾನೂನು ಕರುಡುಗಾರಿಕೆ" ಎಂಬ ಹೆರ್‌ಕಲ್ ಪ್ರಹ್ಲಾದಾಚಾರ್ಯ ಅವರ ಸಿದ್ಧಾಂತದ ಪ್ರಕಾರ ಪ್ರತಿಯೊಬ್ಬ ಮನುಷ್ಯನು ಕಾನೂನು ಎಂದರೇನು? ಎಂಬುದನ್ನು ಅರಿತುಕೊಳ್ಳಬೇಕು ಎಂಬುದರ ವಿವರಣೆಯನ್ನು ಈ ಸಿದ್ಧಾಂತದಲ್ಲಿ ಹೆಚ್ಚಾಗಿ ಅಳವಡಿಸಿದ್ದಾರೆ. ಕಾನೂನಿನ ಬಗೆಗೆ ತಿಳಿದುಕೊಳ್ಳಲು ಇರುವ ಆಸಕ್ತಿ, ಕಾನೂನಿನಿಂದ ಉದ್ಭವಿಸುವ ತೊಡಕುಗಳಿಗೆ ಕರಡುಗಾರನೇ ಅರ್ಹಹೊಣೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕಾನೂನಿನ ಪರಿಭಾಷೆ, ಕಾನೂನಿನ ಪ್ರಕಾರಗಳು, ಕಾನೂನು ರಚನೆಯ, ಸಂಕ್ಷಿಪ್ತ ಮಾಹಿತಿಯನ್ನು ತಿಳಿಸಿರುತ್ತಾರೆ. ಇದನ್ನು ಮಹಿಳಾ ವಕೀಲರು ಎಂಬ ವಿಷಯಕ್ಕೆ ಹೊರೆಹಚ್ಚಿ ನೋಡಿದಾಗ ಕಾನೂನು ರಚನೆಯಿಂದ ಹಿಡಿದು ಕಾನೂನು ಕರಡುಗಾರಿಕೆಯವರೆವಿಗೂ ಇದನ್ನು ಪುರುಷರೇ ರಚಿಸಿದ್ದಾರೆ. ಇಲ್ಲಿ ಮಹಿಳಾ ದೃಷ್ಟಿಕೋನದಿಂದ ವಿಶ್ಲೇಷಿಸಿ ನೋಡಿದಾಗ ಮಹಿಳೆಯರನ್ನು ಕಾನೂನು ರಚನೆಯಲ್ಲಿ ಸಮಭಾಗಿಗಳಾಗಿ ನೋಡಿಲ್ಲದೆ ಇರುವುದರಿಂದ ಪ್ರತಿಯೊಬ್ಬ ಜನಸಾಮಾನ್ಯನು ಕಾನೂನು, ಕಾನೂನು ವಲಯ ಎಂದ ತಕ್ಷಣ ಪುರುಷರು ಮಾತ್ರ ಎಂಬ ಪರಿಕಲ್ಪನೆಯನ್ನು ಹೊಂದಿರುವುದರಿಂದ ಮಹಿಳೆಯರು ಕಾನೂನು ಕ್ಷೇತ್ರದಿಂದ ದೂರಸರಿಯುತ್ತಿದ್ದಾರೆ.

"ಜನಸಾಮಾನ್ಯರಿಗಾಗಿ ಕಾನೂನು ಮಾಹಿತಿ" ಎಂಬ ನ್ಯಾಯ ದೇಗುಲ ಪುಸ್ತಕದಲ್ಲಿ ಸಂಪಾದಕರಾದ ಅರಳಿ ನಾಗರಾಜ ಅವರು ಕಾನೂನು ಸೇವೆಗಳ ಪ್ರಾಧಿಕಾರಿಗಳ ಅಧಿನಿಯಮ 1987ರ ವರದಿಯಲ್ಲಿ ರಾಷ್ಟ್ರ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಒಟ್ಟಾರೆ ಕಾನೂನು ಸೇವೆಗಳ ಪ್ರಾಧಿಕಾರಗಳಲ್ಲಿ ಜನತಾ ನ್ಯಾಯಾಲಯಗಳ ಬಗ್ಗೆ ಕಾನೂನಿನ ನೆರವು ಮತ್ತು ಅದರ ಮಹತ್ವದ ಬಗ್ಗೆ ವಿವರಿಸಿರುವುದನ್ನು ಕಾಣುತ್ತೇವೆ.

"ಮಹಿಳೆ ಮತ್ತು ಕಾನೂನು" ಪ್ರೊ॥ ಅನಿಗೋಳ ಎಸ್.ಆರ್. ಅವರ ಪುಸ್ತಕದಲ್ಲಿ ಮಹಿಳೆ ಮತ್ತು ಕಾನೂನಿಗೂ ಇರುವ ಸಂಬಂಧ ಕುರಿತು ಹೇಳಿದ್ದಾರೆ ಹಾಗೂ ಸ್ತ್ರೀವಾದಿ ನ್ಯಾಯಶಾಸ್ತ್ರದ ಬೆಳವಣಿಗೆಯ ಬಗ್ಗೆ ವಿವರಿಸಿದ್ದಾರೆ. ಅಸಮಾನತೆ ಅತಿಯಾದಾಗ ಮಹಿಳೆಯರು ತಮಗಾದ ಅನ್ಯಾಯದ ವಿರುದ್ದ ನ್ಯಾಯದ ಬೇಡಿಕೆ ಪ್ರಾರಂಭ ಅದುವೇ ಸ್ತ್ರೀವಾದಿ ನ್ಯಾಯಶಾಸ್ತ್ರ ಎಂಬುದಾಗಿ ತಿಳಿಸಿದ್ದಾರೆ.

"ಮಹಿಳೆ ಸಮಾಜ ಕಾನೂನು" ಡಾ॥ ಗೀತಾ ಕೃಷ್ಣಮೂರ್ತಿಯವರು ಈ ಪುಸ್ತಕದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವಂತಹ ಹಿಂಸೆ ಮತ್ತು ಕಾರ್ಯಗಳು ಯಾವ ರೀತಿಯಲ್ಲಿ ಮಹಿಳೆಯರನ್ನು ಶೋಷಿಸುತ್ತಿವೆ. ಇದಕ್ಕೆಲ್ಲಾ ಸಮಾಜದಲ್ಲಿ ಇಂದಿಗೂ ನೆಲೆಯಿರುವಂತಹ ಸಾಮಾಜಿಕ ಪಿಡುಗುಗಳು, ಪೌರುಷಮಯ ಇತಿಹಾಸ ಇವೆಲ್ಲವೂ ಸಹ ಮಹಿಳೆಯನ್ನು ಸಮಾನತೆಯತ್ತ ಹೆಜ್ಜೆ ಹಾಕಲು ಅಡ್ಡ ಗೋಡೆಗಳಾಗಿವೆ. ಇವುಗಳನ್ನು ಹೋಗಲಾಡಿಸಲು ಕಾನೂನು ಎಷ್ಟೇ ಪ್ರಯತ್ನಿಸಿದರೂ ಸಂಪೂರ್ಣವಾಗಿ, ತೊಡೆದು ಹಾಕಲು ಅಗುತ್ತಿಲ್ಲ. ಕಾರಣ ಕಾನೂನು ಮತ್ತು ನ್ಯಾಯ ಇವೆರಡೂ ಸಹ ಹೆಚ್ಚಾಗಿ ಪುರುಷರ ಆಳ್ವಿಕೆಯೇ ಆಗಿರುವುದು ಇದಕ್ಕೆ ಮುಖ್ಯ ಕಾರಣವಾಗಿದೆ ಎಂಬುದನ್ನು ಈ ಪುಸ್ತಕದಲ್ಲಿ ಅವಲೋಕಿಸಬಹುದು ಹಾಗೂ ಮನುಷ್ಯನಿಂದ ಮನುಷ್ಯನಿಗೆ ಲೆಕ್ಕವಿಲ್ಲದಷ್ಟು ಅನ್ಯಾಯಗಳು ಆಗುತ್ತಲೇ ಇವೆ ಎಂಬುದಕ್ಕಾಗಿ ಇಂದಿನ ನಾಗರಿಕ ಸಮಾಜಗಳಲ್ಲಿ ಆಗುತ್ತಿರುವ ಹಲವಾರು ಅನ್ಯಾಯಗಳೇ ಇದಕ್ಕೆ ಸಾಕ್ಷಿ.

'ಜೀವನದಲ್ಲಿ ಕಾನೂನು' ಎಂಬ ಮಾಗಡಿ ರಂಗ ನರಸಿಂಹಯ್ಯನವರು ತಮ್ಮ ಪುಸ್ತಕದಲ್ಲಿ ವಕೀಲರ ಆಯ್ಕೆ, ವಕೀಲರು ಮತ್ತು ಕಕ್ಷಿದಾರರ ನಡುವಿನ ಸಂಬಂಧ ಹೇಗಿರಬೇಕು ಕಕ್ಷಿದಾರರ ವಿಷಯದಲ್ಲಿ ಯಾವುದೇ ವಕೀಲರು ಪ್ರಮಾಣಿಕವಾಗಿ ಕಾರ್ಯವನ್ನು ನಿರ್ವಹಿಸಬೇಕು ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ. ಯಾವುದೇ ಕಕ್ಷಿದಾರನು ವಕೀಲನಿಂದ ಮೋಸಹೋದ ಸಂದರ್ಭದಲ್ಲಿ ಕಕ್ಷಿದಾರರು ಸೆಕ್ಷನ್ 35 ರ ಅಕ್ವೋಕೇಟ್ ಆಕ್ಟ್ ಪ್ರಕಾರ ಬಾರ್ ಕೌನ್ಸಿಲ್‌ಗೆ ದೂರು ಸಲ್ಲಿಸಬಹುದು. ಈ ಅಂಶಗಳನ್ನು ನೋಡಿದಾಗ ಯಾವುದೇ ಕಕ್ಷಿದಾರನು ಪುರುಷ ವಕೀಲರುಗಳಿಂದ ಹೆಚ್ಚು ಮೋಸ ಹೋಗಿರುವ ಸಂಗತಿಗಳನ್ನು ಕೇಳಬಹುದೇ ಹೊರೆತು, ಮಹಿಳಾ ವಕೀಲರುಗಳಿಂದ ಯಾವ ಕಕ್ಷಿದಾರರೂ ಮೋಸ ಹೋಗಿರುವುದಿಲ್ಲ ಎಂಬ ಅಂಶವನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ನೋಡುತ್ತೇವೆ.

"ಮಹಿಳೆ ಕಾನೂನು ಪರಿಹಾರ" ಸಂಪಾದಕರು ಪ್ರೊ. ಆರ್. ಸುನಂದಮ್ಮ ಅವರ ಈ ಪುಸ್ತಕವು ಮಹಿಳೆಯರಿಗೆ ಸಂಬಂಧಪಟ್ಟಂತೆ ಇರುವ ಕಾಯಿದೆ ಕಾನೂನುಗಳು ಪರಿಹಾರಗಳ ಬಗ್ಗೆ ವಿವರಿಸಲಾಗಿದೆ. ಮಹಿಳೆಗೆ ಕುಟುಂಬದ ಹೊರಗೂ–ಒಳಗೂ ಪ್ರತಿನಿತ್ಯ ನಡೆಯುತ್ತಿರುವಂತ ತೊಡಕುಗಳಾದ ವರಕ್ಷಿಣೆ, ಭ್ರೂಣಹತ್ಯೆ, ಲೈಂಗಿಕ ಕಿರುಕುಳ, ವೈಶ್ಯಾವೃತ್ತಿ ದೇವದಾಸಿ ಎಂಬ ಅನಿಷ್ಠ ಪದ್ದತಿ, ಅತ್ಯಾಚಾರ, ಬಾಲ್ಯವಿವಾಹ, ಕೌಟುಂಬಿಕ ಹಿಂಸೆ ಕಾಯ್ದೆ ಆಸ್ತಿಹಕ್ಕು ಹಾಗೂ ಹೆರಿಗೆ ಸಮಸ್ಯೆಗಳೆಲ್ಲದರ ಬಗೆಗಿನ ಕೂಲಂಕಷ ಅಧ್ಯಯನವು ಈ ಪುಸ್ತಕಲ್ಲಿ ಪ್ರಕಟಗೊಂಡಿರುವುದನ್ನು ಕಾಣುತ್ತೇವೆ. ಇವೆಲ್ಲವನ್ನು ಗಮನಿಸಿದಾಗ ಇಲ್ಲಿ ಕಾಯಿದೆ ರಚನೆಗಳ ಹೆಚ್ಚಾಗಿ ಪುರುಷ ಪ್ರಧಾನವಾಗಿರುವುದರಿಂದ ಲಿಂಗ ಸೂಕ್ಷ್ಮ ಆಗಿರುವ ಕಾಯಿದೆಗಳು ಬರಬೇಕು. ಅಂದರೆ ಅದರ ಜಾರಿಗೊಳಿಸುವಿಕೆಯಲ್ಲೂ ಮಹಿಳೆಯರಿರಬೇಕು.

'ಸಂವಿಧಾನ ಮತ್ತು ಮಹಿಳೆ' ಸಂಪಾದಕರು ಡಾ. ಎಚ್.ಎಸ್.ಅನುಪಮಾ ಇವರು ಈ ಪುಸ್ತಕದಲ್ಲಿ ಕೋಮುವಾದ, ಜಾಗತೀಕರಣ ಪ್ರಾದೇಶಿಕತೆ, ಭಯೋತ್ಪದನೆಗಳು ನಮ್ಮ ದೇಶದಲ್ಲಿ ಎಷ್ಟೆಲ್ಲಾ ಸಮಸ್ಯೆಗಳಾಗಿ ಬೆಳೇದು ನಿಂತಿವೆ ಎಂಬುದರ ಬಗ್ಗೆ ಹೇಳಿದ್ದಾರೆ. ಅದನ್ನು ಅಕ್ಷರಗಳಿಂದ ಜನರಿಗೆ ತಲುಪಿಸಿ ಅವರಿಗೆ ಅರಿವು ಮೂಡಿಸಬೇಕು ಎಂಬ ಮಾತನ್ನು ತಿಳಿಸಿದ್ದಾರೆ. ನಮ್ಮ ಸಂವಿಧಾನ ಭಾರತೀಯಯ ಮಹಿಳೆಯರ ಬದುಕು, ಭವಿಷ್ಯಗಳು ಅಮೂಲಗ್ರವಾಗಿ ಬದಲಾಗಲು ಕಾನೂನತ್ಮಕ, ಹಕ್ಕುಬದ್ದ ಭೂಮಿಕೆಯಾಗಿ ಒದಗಿಬಂದದ್ದು ನಮ್ಮ ಸಂವಿಧಾನ, ಹೆಣ್ಣು ಮಕ್ಕಳಿಗೆ, ಬಹುಸಂಖ್ಯಾತ ದಮನಿತ ಜನಸ್ತೋಮಕ್ಕೆ ಮತ್ತು ಶ್ರಮಿಕ ಸಮುದಾಯಗಳಿಗೆ ಈ ಸಂವಿಧಾನವು ನಿಜವಾದ ಅಪದ್ಬಾಂದವ ಹಾಗೆ ಭಾರತೀಯ ಮಹಿಳೆ ಅಂದು, ಮನುಸ್ಮೃತಿಯೆಲ್ಲೇನಿದೆ? ಸಂವಿಧಾನ ಎಂದರೆ, ಸಭೆ, ಸಭೆಯಲ್ಲಿ

ಮಹಿಳೆಯರು, ರಚನೆ, ಸಂವಿಧಾನದಲ್ಲೇನಿದೆ, ಸಂವಿಧಾನ ಮತ್ತು ಮಹಿಳಾ ಹಕ್ಕುಗಳು, ಭಾರತೀಯ ಮಹಿಳೆ ಇಂದು, ಈ ಕಾಲಕ್ಕೂ ತಕ್ಕ ಸಂವಿಧಾನ, ಮಹಿಳೆಯಾಗಿ ಸಂವಿಧಾನಕ್ಕೆ ಮಾಡಿದ್ದೇನು? ಈ ಎಲ್ಲಾ ಲೇಖನಗಳಲ್ಲಿ ಸಂಪಾದಕರೂ ಮಹಿಳೆಗೆ ಸಂವಿಧಾನ ಏಕೆ ಬೇಕು ಅದರ ಅವಶ್ಯಕತೆ ಆಕೆಗೆ ಎಷ್ಟಿದೆ. ಅಂದಿನ ಮಹಿಳೆಯರ ಕಷ್ಟ ಕಾರ್ಪಣ್ಯಗಳು ಉದಾ : ಕಾರ್ನೆಲಿಯಾ ಸೊರಾಬ್ಜಿ ಮತ್ತು ಕಮಲಾ ಸೊಹನಿಯರ ಬದುಕಿನ ಚಿತ್ರಣ, ಇಂದಿನ ಮಹಿಳೆಯರ ಸ್ಥಿತಿಗತಿಗಳು ಹೇಗಿವೆ ಎಂಬುದರ ಸಂಪೂರ್ಣ ವಿವರವನ್ನು ಈ ಪುಸ್ತಕದಲ್ಲಿ ಪ್ರಕಟಗೊಳಿಸಿದ್ದಾರೆ. ಹಾಗೆ ಅಂದು ಸಂವಿಧಾನ ಸಭೆಯಲ್ಲಿ 15 ಮಹಿಳೆಯರು ಪಾಲ್ಗೊಂಡಿದ್ದರು. ಅದರ ಪ್ರತಿಫಲವಾಗಿ ಅನೇಕ ಮಹಿಳಾ ಪರ ಸುಧಾರಣೆಗಳು ಆಗಿರುವುದನ್ನು ನೋಡುತ್ತೇವೆ. ಹಾಗೆಯೇ ಪ್ರತಿಸಭೆಯ ಅರ್ಧದಷ್ಟು ಮಹಿಳೆಯರು ಇಂತಹ ಸಭೆಗಳಲ್ಲಿ ಪಾಲ್ಗೊಂಡಾಗ ಹಲವಾರು ಸುಧಾರಣೆಗಳನ್ನು ತರಲು ಸಾಧ್ಯ.

ಸಾಮಾಜಿಕ ಸಾಧಕೀಯರು ಸಂಪಾದಕರು ಡಾ. ಮಹೇಶ್ ಚಿಂತಾಮನಿ ಮತ್ತು ಡಾ. ವಿಜಯದೇವಿ ಅವರ ಪುಸ್ತಕದಲ್ಲಿ ನಮ್ಮ ಮಹಿಳೆ ನಮ್ಮ ಹೆಮ್ಮೆ, ಯೋಜನೆಯ ಹತ್ತು ಸಂಪುಟಗಳಲ್ಲಿ ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಮಾಡಿದ ಸಾಧನೆಗಳನ್ನು ದಾಖಲಿಸಿದೆ. ರಾಣಿಯರು, ಮತ್ತು ವೀರ ಮಹಿಳೆಯರು, ಅನುಭಾವಿ ಮಹಿಳೆಯರು, ಸಿನಿಮಾ ಸಾಧಕಿಯರು, ಆಡಳಿತ ಸಾಧಕೀಯರು, ಸಂಗೀತ ಮತ್ತು ನೃತ್ಯ ಸಾಧಕಿಯರು, ಸಾಮಾಜಿಕ ಸಾಧಕಿಯರು, ಜನಪದ ಕಾಲವಿದೆಯರು, ಕರಕುಶಲ ಕಲಾವಿದೆಯರು ಮತ್ತು ರಂಗಭೂಮಿ ಕಲಾವಿದೆಯರು ಇನ್ನು ಇತ್ಯಾದಿ ಕ್ಷೇತ್ರಗಳಲ್ಲಿ ದುಡಿದ ಮಹಿಳೆಯರ ಸಾಧನೆಗಳನ್ನು ಈ 8 ಸಂಪುಟಗಳು ಅನಾವರಣಗೊಳಿಸುತ್ತವೆ. ಹಾಗೇ ಕಾನೂನು ಕ್ಷೇತ್ರದಲ್ಲಿ ಪದಾರ್ಪಣೆ ಮಾಡಿದ ಮೊದಲ ಮಹಿಳೆಯರು" ಎಂಬ ಸಂಕಲನದಲ್ಲಿ ಹೇಮಲತಾ ಮಹಿಷಿಯವರು ಕರ್ನಾಟಕದಲ್ಲಿ ಕಾನೂನು ಕ್ಷೇತ್ರದಲ್ಲಿ ಮೊದಲ ಹೆಜ್ಜೆ ಇಟ್ಟ ಪ್ರಮುಖ ಮಹಿಳಾ ನ್ಯಾಯವಾದಿಗಳ ಬಗ್ಗೆ ಕಿರುಪರಿಚಯ ಮಾಡಿಕೊಟ್ಟಿದ್ದಾರೆ. 1950 ರಿಂದ 1975 ರವರೆಗೆ ದಾಖಲಾದ ಮಹಿಳಾ ನ್ಯಾಯವಾದಿಗಳ ಸಂಖ್ಯೆಯನ್ನು ಅಂಕಿ ಅಂಶವನ್ನು ತಿಳಿಸಿದ್ದಾರೆ 2011 ರವರೆಗೆ ವೃತ್ತಿ ಕೈಗೊಂಡ ಒಟ್ಟು ಮಹಿಳಾ ನ್ಯಾಯವಾದಿಗಳ ಸಂಖ್ಯೆ 16,000 ಅದರೂ ವೃತ್ತಿಯನ್ನು ಇಂದು ಸಕ್ರಿಯರಾಗಿರುವವರ ಸಂಖ್ಯೆ ಅದರ ಅರ್ಧರಷ್ಟಿದೆ.

ಪರಾರ್ಶಮನ ಗ್ರಂಥಗಳು

1. ಜೀವನದಲ್ಲಿ ಕಾನೂನು, ಮಾಗಡಿ ರಂಗನರಸಿಂಹಯ್ಯ, ಶ್ರೀ ಸಾಮಾನ್ಯರಿಗೆ ಕಾನೂನು ಪರಿಚಯ, ವಿಜಯವಾಹಿನಿ ಪಬ್ಲಿಕೇಷನ್, ಪ್ರಥಮ, ಮುದ್ರಣ, 2003.

2. ಮಹಿಳೆ ಸಮಾಜ ಕಾನೂನು ಡಾ॥ ಗೀತಾ ಕೃಷ್ಣಮೂರ್ತಿ, ಮೊದಲನೇ ಮುದ್ರಣ, 2007, ಐದನೇ ಮುದ್ರಣ, 2014, ಪ್ರಕಾಶಕರು, ನವಕರ್ನಾಟಕ, ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ ಬೆಂಗಳೂರು–560001.

3. ಸ್ತ್ರೀ ಪರ ಕಾನೂನುಗಳು ಮತ್ತು ಸಂಘಟನೆಗಳು, ಡಾ. ಮಾಲತಿ ಸೋಮಶೇಖರ್, ಹೆಚ್.ಎಂ.ಲೋಕೇಶ್, ವಿಸ್ಮಯ ಪ್ರಕಾಶನ ಪಬ್ಲಿಕೇಷನ್ ಮೈಸೂರು, ಪ್ರಥಮ ಮುದ್ರಣ; 2008.

4. ಕಾನೂನು ಕರಡುಗಾರಿಕೆ, ಲೇಖಕರು, ಹೆರಕಲ್ ಪ್ರಹ್ಲಾದಾಚಾರ್ಯ ಪ್ರಥ ಮುದ್ರಣ, 2008 ಪಬ್ಲಿಕೇಷನ್, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು.

5. ನಿತ್ಯ ಜೀವನದಲ್ಲಿ ಕಾನೂನು ಪರಿಹಾರ, ಶ್ರೀಮತಿ ಪ್ರಭಾಮೂರ್ತಿ, ಕೀರ್ತನ ಪ್ರಕಾಶ, ಪಬ್ಲಿಕೇಷನ್, ಬೆಂಗಳೂರು, ಪ್ರಥಮ ಮುದ್ರಣ, 2010.

6. ಜನ ಸಾಮಾನ್ಯರಿಗಾಗಿ ಕಾನೂನು ಮಾಹಿತಿ (ನಾಲ್ಕನೇ ಆವೃತಿ), ಸಂಪಾದಕರು ನ್ಯಾಯಮೂರ್ತಿ ಶ್ರೀ ಅರಳಿ ನಾಗರಾಜ ಪರಿಷ್ಕೃತ ಆವೃತಿ; 2010 ಪಬ್ಲಿಕೇಷನ್, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು.

7. ಮಹಿಳೆ ಮತ್ತು ಕಾನೂನು, ಲೇಖಕರು–ಅನಿಗೋಳ.ಎಸ್.ಆರ್. ಪ್ರಥಮ ಮುದ್ರಣ, 2013, ಪ್ರಕಾಶಕರು, ಶ್ರೀಮತಿ ವಿದ್ಯಾ.ಎಸ್. ಅನಿಗೋಳ ಶ್ರೀರಾಮ ಪ್ರಕಾಶನ, ವಿಜಯಪುರ–586103.

8. ನಮ್ಮ ಮಹಿಳೆ ನಮ್ಮ ಹೆಮ್ಮೆ–04 ಸಾಮಾಜಿಕ ಸಾಧಕೀಯರು ಪ್ರಧಾನ ಸಂಪಾದಕರು, ಪ್ರೊ. ಮಹೇಶ ಚಿಂತಾಮಣಿ, ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ ಕ.ರಾ.ಮ.ವಿ.ವಿ. ವಿಜಯಪುರ ಸಂಪಾದಕರು, ಪ್ರೊ ವಿಜಯದೇವಿ ಪ್ರಥಮ ಮುದ್ರಣ 2013 ಪಬ್ಲಿಷರ್, ಪ್ರಸಾರಂಗ, ಕರ್ನಾಟಕ ಸ್ಟೇಟ್ ವುಮನ್ಸ್ ಯುನಿವರ್ಸಿಟಿ, ವಿಜಯಪುರ.

9. ಮಹಿಳಾ ಅಧ್ಯಯನ ಪರಿಭಾಷೆ, ಡಾ. ಟಿ.ಆರ್.ಚಂದ್ರಶೇಖರ್, ಕುವೆಂಪು ಭಾಷಾ ಭಾರತಿ, ಪ್ರಾಧಿಕಾರ ಬೆಂಗಳೂರು, ಮುದ್ರಣ, 2016.

10. ಮಹಿಳೆ, ಕಾನೂನು, ಪರಿಹಾರ, ಸಂಪಾದಕರು, ಪ್ರೊ. ಆರ್.ಸುನಂದಮ್ಮ, ಪ್ರಕಾಶಕರು, ನಿರ್ದೇಶಕರು, ಪ್ರಸಾರಾಂಗ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ ಪ್ರಥಮ ಮುದ್ರಣ, 2017.

11. ಮಾನವ ಘನತೆಯ ಪರವಾದ ಮಾನವೀಯ ಹಕ್ಕುಗಳ ಚಿಂತನೆಗಳು, ನ್ಯಾ॥ ಶಿವರಾಜ ವಿ.ಪಟೀಲರವರ, ಕಾನೂನು ಉಪನ್ಯಾಸ ಮಾಲಿಕೆ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು.

12. ಅಂತರ್ ಜಾಲದ ಮಾಹಿತಿಯ ಮೂಲಕವೂ ಕಲೆಹಾಕಲಾಗಿದೆ.

ಸಂಶೋಧನ ವಿದ್ಯಾರ್ಥಿನಿ

ಶರ್ಮಿಳ

ಮಹಿಳಾ ಅಧ್ಯಯನ ವಿಭಾಗ
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ,
ವಿಜಯಪುರ

ಮಾರ್ಗದರ್ಶಕರು

ಪ್ರೊ॥ ಹೇಮಲತಾ.ಎಚ್.ಎಮ್.

ಮಹಿಳಾ ಅಧ್ಯಯನ ವಿಭಾಗ
ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ,
ವಿಜಯಪುರ